**ಸಾಕ್ಷಿಗೆ ದಿನಾಂಕಃ07-04-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀ. BPR ವಕೀಲರಿಂದ ::**

ಸರ್ವೇ ನಂಬರ್ 49/4 ರ ಮಾಲೀಕರಾದ ಶಿವಕುಮಾರ್ ರವರು ನನ್ನ ತಮ್ಮ ಆಗಿರುತ್ತಾರೆ. ಸದರಿ ಜಾಗದ ಖಾತೆಯು ಶಿವಕುಮಾರ್ ರವರ ಹೆಸರಿಗೆ ನಿಡಿ6 ಪಹಣಿಯಲ್ಲಿ ಕಂಡು ಬರುವಂತೆ MR H 34/2023-24 ರನ್ವಯ ವಿಭಾಗದಂತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಅದೇ ರೀತಿ ಅದೇ ವಿಭಾಗದ ಅಡಿಯಲ್ಲಿ ನನ್ನ ಹೆಸರಿಗೆ ನಿಡಿ9 ರಲ್ಲಿ ಕಂಡು ಬರುವಂತೆ ಸರ್ವೇ ನಂಬರ್ 49/7 ರಲ್ಲಿನ 34 ಗುಂಟೆ ಜಾಗದ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ನನ್ನ ಹಾಗೂ ಶಿವಕುಮಾರ್ ರವರ ನಡುವೆಯಾದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1999 ರಲ್ಲಿ ನನ್ನ ತಂದೆ ಸಣ್ಣ ನಂಜಪ್ಪ ರವರು ರಂಗಮ್ಮ ಕೋಂ ರಾಮಪ್ಪ ಮತ್ತು ಇತರರಿಂದ ಜಾಗವನ್ನು ಖರೀದಿ ಮಾಡಿದ್ದರು ಎಂದರೆ ಸರಿ. ರಂಗಮ್ಮನ ಗಂಡ ರಾಮಪ್ಪ ರವರು ನಾಗಪ್ಪ ರವರ ಮಗ ಆಗಿರುತ್ತಾರೆ ಎಂದರೆ ಸರಿ. ಸದರಿ ನಾಗಪ್ಪ ರವರ ಸರ್ವೇ ನಂಬರ್ 49/3 ರ ಮೂಲ ಮಾಲೀಕರಾದ ಬಸಪ್ಪ ಬಿನ್ ಕರಿಯಪ್ಪ ರವರ ಮಗ ಆಗಿರುತ್ತಾರೆ ಎಂದರೆ ಸರಿ. 1999 ರಲ್ಲಿ ನಾನು ಪ್ರಾಪ್ತ ವಯಸ್ಕನಾಗಿದ್ದು ಆ ಸಮಯದಲ್ಲಿ ನನಗೆ ವ್ಯವಹಾರಿಕ ಜ್ಞಾನ ಇತ್ತು ಎಂದರೆ ಸರಿ.

2013-14 ರಲ್ಲಿ ವಾದಿಯ ಕುಟುಂಬದವರು ನನ್ನ ತಂದೆ ವಿರುದ್ದ ಎಸಿ ನ್ಯಾಯಾಲಯದಲ್ಲಿ ನಮ್ಮ ವಿರುದ್ದ ಹೂಡಿದ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸಾಕ್ಷಿಗೆ ಸದರಿ ಪ್ರಕರಣದಲ್ಲಿನ ಎಸಿ ರವರ ಆದೇಶದ ನಕಲು ಪ್ರತಿ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ನಿಪಿ10 ಎಂದು ಗುರುತಿಸಲಾಯಿತು. 1999 ರಲ್ಲಿ ನನ್ನ ತಂದೆಗೆ ನಾಗಪ್ಪನ ವಾರಸುದಾರರು 1 ಎಕರೆ 30 ಗುಂಟೆ ಜಾಗವನ್ನು ಮಾರಾಟ ಮಾಡಲು ಅಧಿಕಾರ ನನ್ನ ಪ್ರಕಾರ ಇತ್ತು. ಸರ್ವೇ ನಂಬರ್ 49/3 ರಲ್ಲಿ ವಾದಿಯ ತಂದೆ ನಾಗಣ್ಣ ರವರಿಂದ 2 ಎಕರೆ 14 ಗುಂಟೆ ಜಾಗವನ್ನು ನೋಂದಾಯಿತ ಕ್ರಯಪತ್ರದ ಅಡಿಯಲ್ಲಿ 27.11.1972 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಿಂದ ವಾದಿಯ ತಂದೆ ಹಾಗೂ ಅವರ ನಂತರದಲ್ಲಿ ವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅವರು ಅಷ್ಟು ಜಾಗದ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಯ ಕುಟುಂಬದವರು 1972 ರ

ಕ್ರಯಪತ್ರದ ಅಡಿಯಲ್ಲಿ ಸ್ವಾಧೀನದಲ್ಲಿ ಇದ್ದರೂ ಸಹ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾವಿತ್ರಮ್ಮ ರವರ ಕುಟುಂಬದವರು ಸರ್ವೇ ನಂಬರ್ 49/3 ರಲ್ಲಿನ ಪಶ್ಚಿಮ ದಿಕ್ಕಿನ 1 ಎಕರೆ 20 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ದಾವಾ ಸರ್ವೇ ನಂಬರ್ ನಲ್ಲಿ ಒಟ್ಟು 5 ಎಕರೆ 8 ಗುಂಟೆ (4 ಗುಂಟೆ ಖರಾಬು ಸೇರಿ) ಜಾಗವಿದ್ದು, ಅದರಲ್ಲಿ ವಾದಿಯ ತಂದೆ 1972 ರಲ್ಲಿ 2 ಎಕರೆ 14 ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದು ನಂತರದಲ್ಲಿ ಸಾವಿತ್ರಮ್ಮ ರವರು 1 ಎಕರೆ 20 ಗುಂಟೆ ಜಮೀನು ಅನ್ನು ಖರೀದಿ ಮಾಡಿದ್ದು, ಆದಕಾರಣ ಸರ್ವೇ ನಂಬರ್ 49/3 ರ ಮಾಲೀಕರ ಖಾತೆಯಲ್ಲಿ ಕೇವಲ 1 ಎಕರೆ 10 ಗುಂಟೆ ಜಮೀನು ಬಾಕಿ ಉಳಿದಿತ್ತು ಎಂದರೆ ಸರಿಯಲ್ಲ. ಆದಕಾರಣ ಬಸಪ್ಪನ ವಾರಸುದಾರರು ನನ್ನ ತಂದೆಗೆ 1 ಎಕರೆ 30 ಗುಂಟೆ ಜಾಗವನ್ನು ಮಾರಾಟ ಮಾಡಲು ಆ ಸಮಯದಲ್ಲಿ ಅಧಿಕಾರ ಇತ್ತು ಎಂದು ತೋರಿಸಲು ನನ್ನ ಬಳಿ ಬಸಪ್ಪ ರವರ ಕುಟುಂಬದ ಹೆಸರಿಗೆ ಇದ್ದ ಕಂದಾಯ ದಾಖಲೆ ಇರುತ್ತದೆ. ನಾನಾಗಲೀ ನನ್ನ ತಂದೆಯಾಗಲೀ 1999 ರಲ್ಲಿ ಸರ್ವೇ ನಂಬರ್ 49/3 ಗೆ ಸಂಬಂಧಪಟ್ಟಂತೆ ಇಸಿ ಯನ್ನು ಪರಿಶೀಲನೆ ಮಾಡಿರಬಹುದು, ಈಗ ನನಗೆ ನೆನಪಿಲ್ಲ. ನಾನು ಹೇಳುತ್ತಿರುವಂತೆ ಆ ಸಮಯದಲ್ಲಿ ಇಸಿ ಪರಿಶೀಲನೆ ಮಾಡಿದ್ದಲ್ಲಿ ನಮಗೆ 1 ಎಕರೆ 30 ಗುಂಟೆ ಖರೀದಿ ಮಾಡಲು ನಮಗೆ ಆ ಸಮಯದಲ್ಲಿ ತಿಳಿದು ಬರುತ್ತಿತ್ತು ಎಂದರೆ ಸರಿಯಲ್ಲ. ಎಂ ಆರ್ 1/2000-01 ರಡಿಯಲ್ಲಿ ಸರ್ವೇ ನಂಬರ್ 49/3 ಗೆ ಸಂಬಂಧಪಟ್ಟಂತೆ 1 ಎಕರೆ 34 ಗುಂಟೆ ಜಮೀನಿನ ಖಾತೆ ಬಸಪ್ಪನ ಕುಟುಂಬದವರ ಹೆಸರಿನಲ್ಲಿ ಬದಲಾವಣೆ ಆಗುವ ಪೂರ್ವದಲ್ಲಿ ನನ್ನ ತಂದೆಯ ಹೆಸರಿಗೆ 1999 ರಲ್ಲಿ ಕ್ರಯಪತ್ರ ಆಗಿ ಖಾತೆ ಬದಲಾವಣೆ ಸಹ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಎಂ ಆರ್ ಅನ್ವಯ ಬದಲಾವಣೆಯಾದ 1 ಎಕರೆ 34 ಗುಂಟೆ ಪ್ರಸ್ತುತದಲ್ಲಿ ಯಾರ ಹೆಸರಿನಲ್ಲಿ ಮತ್ತೆ ಬದಲಾವಣೆ ಆಗಿರುತ್ತದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ಸರ್ವೇ ನಂಬರ್ 49/3 ರ ಆಗ್ನೆಯ ದಿಕ್ಕಿಗೆ ವಾದಿ ಕುಟುಂಬದವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ತಂದೆಯ ಮಾರಾಟಗಾರರು ತಪ್ಪಾಗಿ 1 ಎಕರೆ 34 ಗುಂಟೆ ಖಾತೆ ಅವರ ಹೆಸರಿಗೆ ಮಾಡಿಕೊಂಡಿದ್ದನ್ನು ಎಸಿ ನ್ಯಾಯಾಲಯದಲ್ಲಿ ವಜಾ ಮಾಡಿ ಆದೇಶ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ವಾದಿಗಳು ಸರ್ವೇ ನಂಬರ್ 49/3 ರಲ್ಲಿನ 2 ಎಕರೆ 14 ಗುಂಟೆ ಜಾಗಕ್ಕೆ ಮಾಲೀಕರೆಂದು ಘೋಷಿಸಲು ದಾವೆ ಹೂಡಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಅಣ್ಣೆ ಗ್ರಾಮದ ಸರ್ವೇ ನಂಬರ್ 49/1 ಅಥವಾ 49/2 ಗೆ ಸಂಬಂಧಪಟ್ಟಂತೆ ಹೂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

1999-2000 ನೇ ಸಾಲಿನಲ್ಲಿ ನನ್ನ ತಂದೆಗೆ 1 ಎಕರೆ 30 ಗುಂಟೆ ಜಾಗವನ್ನು ಮಾರಾಟ ಮಾಡಲು ಅದರ ಹಿಂದಿನ ಮಾಲೀಕರಿಗೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ 49/3 ರಲ್ಲಿ ಆದ ಪೋಡಿಯನ್ನು ವಾದಿಯ ಕುಟುಂಬದವರು ಪ್ರಶ್ನೆ ಮಾಡದ ಕಾರಣ ದಾವಾ ಸ್ವತ್ತಿನ ಅವರ ಮಾಲೀಕತ್ವವನ್ನು ನಾನು ಅಲ್ಲಗಳೆಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ 49/3 ರ ಆಗ್ನೇಯ ದಿಕ್ಕಿನ 2 ಎಕರೆ 14 ಗುಂಟೆ ಜಮೀನಿನಲ್ಲಿ ವಾದಿಯ ಕುಟುಂಬದವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗದಲ್ಲಿ ವಾದಿಯ ಕುಟುಂಬದವರು ಮೂರು ಕೊಳವೆ ಬಾವಿಗಳನ್ನು ಕೊರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮಗೆ ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ವಾದಿಗಳ ದಾವಾ ಶೆಡ್ಯೂಲ್ ಸ್ವತ್ತಿನ ಮಾಲೀಕತ್ವವನ್ನು ವಿನಾಕಾರಣ ಅಲ್ಲಗಳೆಯುತ್ತಿದ್ದೇವೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: